ದಿನಾಂಕಃ **17/07/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೆಳಕಂಡ ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

ನಿಶಾನೆ ಪಿ-72- Invoice

ನಿಶಾನೆ ಪಿ-73- X-ray

ನಿಶಾನೆ ಪಿ-74- ವೈದ್ಯಕೀಯ ದಾಖಲೆ

ಪಾಟೀ ಸವಾಲುಃ **3**ನೇ ಎದುರುದಾರರ ಪರ ವಕೀಲರಿಂದಃ

1. ದಿಃ 19-07-2014 ರಂದು ನಾನು ಮಂಜು ಅವರ ಬೈಕನಲ್ಲಿ ಹೋಗುತಿದ್ದೆನು. ಮೋಹನ್ ಕುಮಾರ್ ಅದನ್ನು ಚಲಾಯಿಸುತಿದ್ದರು. ಮೋಹನ್ ಕುಮಾರ್ ಅವರಿಗೆ ಬೈಕ್ ಓಡಿಸಲು D.L ಇರಲಿಲ್ಲ ಎಂದರೆ ನಿಜ. ಪೊಲೀಸರು ಸಲ್ಲಿಸಿರುವ ಅಂತಿಮ ವರದಿ ಸರಿ ಇದೆ. ಅಪಘಾತಕ್ಕೆ KSRTC Bus ಕಾರಣ. KSRTC Bus ಚಾಲಕನು ಅತೀ ವೇಗ ಮತ್ತು ಅಜಾಗರುಕತೆಯಿಂದ ಬಸ್ ಚಲಾಯಿಸಿದ್ದರಿಂದ ಅಪಘಾತ ಆಗಿದೆ. ಅಪಘಾತವಾದಾಗ ಪೊಲೀಸ ಠಾಣೆಗೆ ದೂರನ್ನು ಗುರುಮೂರ್ತಿ ಎನ್ನುವವರು ಕೊಟ್ಟರು. ಮೊದಲು ನಾನು SSM ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆನು. ಅಲ್ಲಿ ಒಂದು ವಾರ ಇದ್ದೆನು. ನಾನು ಅಲ್ಲಿಗೆ ಯಾವ ಕಾರಣಕ್ಕೆ ಚಿಕಿತ್ಸೆಗೆ ಹೋದೆನೆಂದು ಮಾಹಿತಿ ಪಡೆದಿದ್ದಾರೆ. ಆ ನಂತರ ನಾನು ಚಿಕಿತ್ಸೆಗೆ ಬೇರೆ ಎಲ್ಲೂ ಹೋಗಿಲ್ಲ. ನಾನು ಈಗ 2 ವರ್ಷಗಳಲ್ಲಿ follow-up treatment ಗೆ ಹೋಗಿಲ್ಲ ಎಂದರೆ ಸರಿಯಲ್ಲ ಆಗಾಗ್ಗೆ ಹೋಗುತಿದ್ದೆನು. ಆ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿಲ್ಲ. ಹೆಚ್ಚಿನ ಪರಿಹಾರ ಪಡೆಯಲು ನಾನು ರೂ.50,000/- ಚಿಕಿತ್ಸೆಗೆ ಬೇಕೆಂದು ದಾಖಲೆಯನ್ನು ಸೃಷ್ಟಿ ಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಔಷಧಿ ಮತ್ತು ಮಾತ್ರೆಗಳಿಗೆ ರೂ.2,20,000/- ಖರ್ಚು ಆಗಿದೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲು ಹಾಜರು ಮಾಡಿರುವ ಮೆಡಿಕಲ್ ಬಿಲ್ಲುಗಳು ಸಹ ಸೃಷ್ಟಿ ಮಾಡಿದವು ಎಂದರೆ ಸರಿಯಲ್ಲ. ನಾನು ಈಗಲೂ ಸಹ JCB ಕೆಲಸ ಮಾಡುತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಜಮೀನು ಇಲ್ಲ. ನಾನು ಯಾವುದೇ ಆದಾಯ ಇಲ್ಲದೇ ಇದ್ದರೂ, ಕೆಲಸ

ಮಾಡದೇ ಇದ್ದರೂ, ವಾರ್ಷಿಕ ರೂ.1 ಲಕ್ಷ ಆದಾಯ ಇದೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ಲೋಕೇಶ ಎಂ.ಜಿ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು